ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರ: 1751/2022

ಚಾಸಾ:2 ಪ್ರಾಸಾ:2

ದಿನಾಂಕ: 20.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಧುಸೂದನ |
| ತಂದೆಯ ಹೆಸರು | : | ರತ್ನಾಕರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2016 ರಿಂದ 2022ರವರೆಗೆ ಕುಂದಾಪುರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 04-04-2022 ರಂದು ಠಾಣಾ ಸಿಬ್ಬಂದಿಗಳಾದ ಚಾಸಾ-1 ಹಾಗೂ ಚಾಸಾ-3 ರಿಂದ 5 ರವರೊಂದಿಗೆ ರಂಝಾನ್ ಹಬ್ಬದ ವಿಶೇಷ ಗಸ್ತುವಿಗಾಗಿ ಕಂಡ್ಲೂರು ಗ್ರಾಮದ ದೂಪದಕಟ್ಟೆ ಬಳಿ ಬೆಳಗ್ಗೆ 7-50 ರ ಸಮಯದಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ದೂರದಲ್ಲಿ ತನ್ನ ದ್ವಿ ಚಕ್ರ ವಾಹನವನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ ಪರಾರಿಯಾಗಿರುತ್ತಾನೆ. ಆತ ಕಂಡ್ಲೂರಿನ ಖಾಜಿ ಅಫಾನ್ ಆಗಿರುತ್ತದೆ.

ನಂತರ ವಾಹನದ ಬಳಿ ಹೋಗಿ ಪರಿಶೀಲಿಸಿದಾಗ ಅದರ ಸಂಖ್ಯೆ ಕೆಎ-20-ಇಎಂ-2551 ಹೋಂಡಾ ಎಲಿವೇಟರ್ ಆಗಿದ್ದು ಅದರ ಮುಂಭಾಗದಲ್ಲಿ ಕಾಲು ಇಡುವ ಜಾಗದಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಚೀಲ ಇದ್ದು, ಸದ್ರಿ ಚೀಲವನ್ನು ಪರಿಶೀಲಿಸಿದಾಗ ದನದ ತ್ಯಾಜ್ಯ ಇರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಸ್ಥಳೀಯರಾದ ಚಾಸಾ-6 ಮತ್ತು 7 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಪರಿಶೀಲಿಸಿದಾಗ ಸದ್ರಿ ಚೀಲದಲ್ಲಿ ಒಂದು ಬಾಲ ಸಹಿತ ಇರುವ ಕೆಂಪು ಬಣ್ಣದ ಒಂದು ದನದ ಚರ್ಮ, ತಲೆಯ ಎಲುಬು, ದನದ ಕಾಲಿನ ಗೊರಸು-4, ದನದ ಹೊಟ್ಟೆಯ ತ್ಯಾಜ್ಯ, ದನದ ಕೊಂಬು ಮತ್ತು ಕಿವಿ ಇರುವುದು ಕಂಡು ಬಂದಿರುತ್ತದೆ. ಅವುಗಳನ್ನು ಎಲ್ಲಿಯೋ ಕದ್ದು ತಂದು ಯಾವುದೇ ಪರಾವನಿಗೆ ಇಲ್ಲದೆ ಹಿಂಸಾಸ್ಮತಕವಾಗಿ ವಧೆ ಮಾಡಿ ತ್ಯಾಜ್ಯ ವಿಲೆ ಮಾಡುವುದಾಕ್ಕಾಗಿ ಹೋಗಿರುವುದಾಗಿ ಕಂಡು ಬಂದಿರುತ್ತದೆ.

ಈ ಸಂಬಂಧ ಪಂಚರ ಸಮಕ್ಷಮ ಸದ್ರಿ ವಾಹನ ಮತ್ತು ದನದ ತ್ಯಾಜ್ಯವನ್ನು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಮಹಜರು ಜರುಗಿಸಿ ವಶಕ್ಕೆ ಪಡೆದು ನಂತರ ಠಾಣೆಗೆ ಬಂದು ವರದಿ ನೀಡಿರುತ್ತೇನೆ. ಸದ್ರಿ ಪಂಚನಾಮೆಗೆ ನನ್ನ ಮತ್ತು ಚಾಸಾ-3 ರಿಂದ 7 ರವರು ಸಹಿ ಮಾಡಿರುತ್ತೇವೆ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8 ರಿಂದ 11ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ**</u>

ಠಾಣೆಯಿಂದ ಬೆಳಿಗ್ಗೆ 7 ಗಂಟೆಗೆ ಹೊರಟಿರುತ್ತೇವೆ. ರಮ್ಜಾನ್ ಹಬ್ಬದ ಇದ್ದ ಕಾರಣ ರೌಂಡ್ಸಗಾಗಿ ಹೋಗಿರುತ್ತೇವೆ. ಅಕ್ರಮವಾಗಿ ಜಾನುವಾರುಗಳ ಮಾಂಸವನ್ನು ಮಾರಾಟ ಮಾಡುವ ಯಾವುದೇ ಮಾಹಿತಿ ನಮಗೆ ಇರಲಿಲ್ಲ. ದೂಪದ ಕಟ್ಟೆಗೆ ನೇರವಾಗಿ ಹೋಗಿ ವಾಹನಗಳ ತಪಾಸಣೆ ಮಾಡಿರುತ್ತೇವೆ. 7-15ರ ವೇಳೆಗೆ ಅಲ್ಲಿಗೆ ತಲುಪಿರುತ್ತೇವೆ. ಸದ್ರಿ ಸ್ಥಳ ನಮ್ಮ ಠಾಣೆಯಿಂದ ಅರ್ಧ ಕಿ.ಮೀ ದೂರವಿರುತ್ತದೆ. ಸುಮಾರು 10-15 ವಾಹನಗಳನ್ನು ತಪಾಸಣೆ ಮಾಡಿರಬಹುದು. ಸದ್ರಿ ಸ್ಥಳ 3 ರಸ್ತೆ ಕೂಡುವ ಜಂಕ್ಷನ್ ಎಂದರೆ ಸರಿ. ಅದು ಕುಂದಾಪುರದಿಂದ ಅಂಪಾರು ಕಡೆಗೆ ಹೋಗುವ ರಸ್ತೆ ಎಂದರೆ ಸರಿ. ನಾವು ತಪಾಸಣೆ ಮಾಡುತ್ತಿದ್ದ ರಸ್ತೆ ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತದೆ. ಅಲ್ಲಿಂದ 200 ಮೀಟರ್ ಹಿಂದಕ್ಕೆ ನಾವು ನಿಂತಿರುತ್ತೇವೆ.

ಆರೋಪಿ ಕಂಡ್ಲೂರು ಕಡೆಯಿಂದ ಬಂದು ವಾಲ್ತೂರು ಕಡೆಗೆ ಹೋಗುತ್ತಿದ್ದನು. ನಮ್ಮ ವಾಹನವನ್ನು ವಾಲ್ತೂರು ಕಡೆಗೆ ಮುಖ ಮಾಡಿ ನಿಲ್ಲಿಸಿರುತ್ತೇವೆ. ನಮ್ಮ ಹಿಂದಿನಿಂದ ಬೈಕು ಬಂದಿರುತ್ತದೆ. ನಮ್ಮನ್ನು ನೋಡಿ ಸುಮಾರು 200 ಮೀಟರ್ ದೂರದಲ್ಲಿ ಆತ ಓಡಿ ಹೋಗಿರುತ್ತಾನೆ. ಅಂದರೆ ವಾಲ್ತೂರು ರಸ್ತೆಗೆ ಬಂದು ವಾಹನವನ್ನು ಬಿಟ್ಟು ಓಡಿ ಪೂರ್ವ ದಿಕ್ಕಿಗೆ ಹೋಗಿರುತ್ತಾನೆ. ಆರೋಪಿ ಸ್ಥಳೀಯನಾಗಿದ್ದ ಕಾರಣ ನಮಗೆ ಹಾಗೂ ಸಿಬ್ಬಂದಿಯವರಿಗೆ ಪರಿಚಯವಿತ್ತು. ಆತ ಪರಿಚಯಸ್ಥರಾದ ಕಾರಣ ಗುರುತಿಸಿರುತ್ತೇವೆ. ನಂತರ ಚಾಸಾ-6 ಮತ್ತು 7ರವರನ್ನು ಪ್ರಕರಣ ಪತ್ತೆ ಹಚ್ಚಿದ ನಂತರ ಚಾಸಾ-1 ರವರು ಕರೆಯಿಸಿರುತ್ತಾರೆ. ಎಲ್ಲಿಂದ ಕರೆಯಿಸಿದ್ದರು ಎಂದು ನನಗೆ ಮಾಹಿತಿ ಇಲ್ಲ.

ಅವರಿಬ್ಬರೂ ಕಂಡ್ಲೂರು ಪೇಟೆಯ ನಿವಾಸಿಗಳು ಎಂದರೆ ಸರಿ. ಅಲ್ಲಿಂದ 2 ಕಿ.ಮೀ ದೂರ ಇರಬಹುದು. ಅದು ಹಾಡಿ ಸ್ಥಳವಾಗಿರುತ್ತದೆ ಯಾವುದೇ ಮನೆಗಳು ಇರುವುದಿಲ್ಲ. ದೂಪದ ಕಟ್ಟೆ ಜಂಕ್ಷನ್ ಕಡೆಗೆ ಬರಬೇಕಾದರೆ ಅದೇ ರಸ್ತೆಯಿಂದ ಬರಬೇಕು ಎಂದರೆ ಸರಿ. ರಸ್ತೆಯ ಪಕ್ಕದಲ್ಲಿ ಗೂಡಾಂಗಡಿ ಮತ್ತು ಬಸ್ಸು ನಿಲ್ದಾಣ ಇದೆ ಎಂದರೆ ಸರಿ. ಅದು ಸಾಮಾನ್ಯವಾಗಿ ಜನ ಓಡಾಡುವ ಸ್ಥಳ ಎಂದರೆ ಸರಿ. ನಿಪಿ-2ಕ್ಕೆ ಸ್ಥಳೀಯರನ್ನು ಪಂಚರನ್ನಾಗಿ ಕಾಣಿಸಿಲ್ಲ ಎಂದರೆ ಸರಿ.

ಆರೋಪಿಯನ್ನು ವಿಚಾರಿಸಿದ ಸಂಧರ್ಬ ನಾನು ಇರಲಿಲ್ಲ. ದನವನ್ನು ವಧೆ ಮಾಡಿದೆ ಎಂಬ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ನಿಪಿ-2ನ್ನು ಯಾರು ಬರೆದರು ಎಂದು ನೆನಪಿಲ್ಲ. ಬೈಕನ್ನು ಕಾಂಕ್ರೀಟ್ ರಸ್ತೆಯ ಪಕ್ಕದಲ್ಲಿ ಬಿಟ್ಟು ಹೋಗಿರುತ್ತಾರೆ. ಪಂಚನಾಮೆ ಜರುಗಿಸುವ ವೇಳೆಗೆ ಪೋಟೋ ನಮ್ಮ ಸಿಬ್ಬಂದಿಯವರು ತೆಗೆದಿರುತ್ತಾರೆ.

ದಿಃ 04-04-2022 ರಂದು ಚಾಸಾ-1 ಮತ್ತು ಸಿಬ್ಬಂದಿಯವರೊಂದಿಗೆ ರೌಂಡ್ಸ್ ಕರ್ತವ್ಯದಲ್ಲಿ ಇಲ್ಲದೆ ನ್ಯಾಯಾಲಯದ ಮುಂದೆ ಇರುವ ಆರೋಪಿ ವಾಹನದಲ್ಲಿ ಬಂದು ಆತನ ಬಳಿ ಬ್ಯಾಗ್ ನಲ್ಲಿ ಯಾವುದೇ ದನದ ತ್ಯಾಜ್ಯಗಳು ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ಕಂಡು ಓಡಿ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದ ಬೈಕು ಮತ್ತು ಅದರಲ್ಲಿರುವ ದನದ ತ್ಯಾಜ್ಯಗಳನ್ನು ವಶಕ್ಕೆ ಪಡೆದು ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲೆಗೆ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ರವರು ಸ್ಥಳದಲ್ಲಿ ಹಾಜರು ಇದ್ದು ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 04-04-2022 ರಂದು ನಾನು

ಮೇಲಾಧಿಕಾರಿಯವರಿಗೆ ಈ ಸಂಬಂಧ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಮಾಡಿದ ದಾಖಲೆಗಳಿಗೆ ಸಹಿ ಮಾಡಿರುವುದನ್ನು ಬಿಟ್ಟು ಬೇರೆ ಯಾವುದೇ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**